ನಕ್ಷತ್ರಪಟ



ಧನಂಜಯ ಕುಂಬ್ಳೆ

ಕಲೆ: ಸಂತೋಷ್ ಸಸಿಹಿತ್ಲು



# ಕಿವಿಮಾತು

ಏತಕೆ ಪುಟ್ಟಾ ಸುಮ್ಮನೆ ಕೂತೆ
ಎಲ್ಲರ ಜೊತೆ ಜೊತೆ ಮಾತಾಡು
ಮಾತಿಗೆ ಮಾತು ಬೆಳೆಸುತ ನೀನು
ನಲಿನಲಿದೆಲ್ಲರ ಮನ ಗೆಲ್ಲು

ಸುಮ್ಮನೆ ಕುಳಿತು ಕಾಲವ ಕಳೆಯದೆ
ಎಲ್ಲರ ಕೂಡಿ ಆಟಾಡು
ಆಡುತ ಪಾಡುತ ಕಲಿತರೆ ನೀನು
ಉತ್ತಮ ಹೆಸರನು ತರಬಹುದು

ಮೌನದಿ ಹೀಗೆ ಕುಳಿತರೆ ಹೇಗೆ
ಓದಿಗೆ ಮನಸನು ನೀಡು
ಓದುತ ತಿಳಿಯುತ ಬೆಳೆದರೆ ನೀನು
ನಾಡಿಗೆ ಗುರುವು ನೋಡು

ಹೊಸಹೊಸ ಕನಸನು ಕಟ್ಟುತ ನೀನು
ಮುಂದಕೆ ಸಾಗು ಬಹುದೂರ
ಕನಸನು ಕಾಣುತ ನನಸಿಗೆ ದುಡಿದರೆ
ಗಳಿಸುವೆ ಗೆಲುವನು ಬಹುಬೇಗ

ಸುಮ್ಮನೆ ಕೂತರೆ ಏನೂ ಆಗದು
ದುಡಿಮೆಯೇ ಬದುಕಿಗೆ ಶಕ್ತಿ
ಕೈಕೆಸರಾದರೆ ಬಾಯ್‌ಮೊಸರೆಂಬುದು
ಹಿರಿಯರು ಕಂಡಿಹ ಯುಕ್ತಿ

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68